
ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಸೈಬೀರಿಯಾದಲ್ಲಿ ಪಿಯಾನೊ ಹುಡುಕಾಟ

ಪಿಯಾನೊ ಹುಡುಕುತ್ತ ಹೊರಟ ಸೋಫಿ ರಾಬರ್ಟ್ಸ್ ಕೈಗೊಳ್ಳುವ ಯಾನ ಅವರ ಮೂಲ ಉದ್ದೇಶವನ್ನೇ ಮರೆತು, ಒಂದು ಕಾಲಮಾನವನ್ನೇ ಶೋಧಿಸುವ ಪ್ರಯತ್ನವಾಗಿ ಬದಲಾಗುತ್ತದೆ.




ಒಂದು ಕಾಲಘಟ್ಟದ ಚರಿತ್ರೆ ಮತ್ತು ಸಾಂಸ್ಕೃತಿಕ ವಿದ್ಯಮಾನಗಳನ್ನು ಗ್ರಹಿಸಲು ನೇರ ನಿರೂಪಣೆಯಾಚೆ ಭಿನ್ನವಾಗಿ ಪ್ರಯತ್ನಿಸಬಹುದೇ? ಬರೇ ಉಳಿದುಕೊಂಡ ಸ್ಥಳ, ಪ್ರಯಾಣದ ಪರಿ ಮತ್ತು ನೋಡಿದ ಜಾಗಗಳ ವಿವರಣೆಯ ಹೊರತಾಗಿ ಪ್ರವಾಸ ಕಥನ ಬರೆಯಲು ಸಾಧ್ಯವೇ? ಇರುವುದನ್ನು ಬಿಟ್ಟು ಇಲ್ಲದಿರುವುದನ್ನು ಧ್ಯಾನಿಸುವುದೇ ಒಂದು ಕಥನಕ್ಕೆ ಕಾರಣವಾಗಬಹುದೇ? ಇಂಥ ಅನೇಕ ಪ್ರಶ್ನೆಗಳನ್ನು ಕೇಳಿಕೊಳ್ಳುವಂತೆ ಪ್ರೇರೇಪಿಸುವ ಪುಸ್ತಕ, ಸೋಫಿ ರಾಬರ್ಟ್ಸ್ ಅವರ 'ದ ಲಾಸ್ಟ್ ಪಿಯೋನೊಸ್ ಆಫ್ ಸೈಬೀರಿಯಾ'.

ಸೈಬೀರಿಯಾ ಎನ್ನುವ ಭೂಖಂಡ ನಮ್ಮ ಮನಸ್ಸಿನಲ್ಲಿ ಅನೇಕ ಚಿತ್ರಗಳನ್ನು ಹುಟ್ಟುಹಾಕುತ್ತದೆ. ಚಕ್ರವರ್ತಿ ಪೀಟರ್ ದ ಗ್ರೇಟ್‌ನ ಕಾಲದಲ್ಲಿ ಏಷಿಯಾ ಖಂಡದಿಂದ ಸೈಬೀರಿಯಾವನ್ನು ಒಳಗೊಳ್ಳುತ್ತಾ ರಷ್ಯಾ ಯುರೋಪಿಗೆ ವಿಸ್ತರಿಸಿಕೊಂಡಿದ್ದೇ ಒಂದು ರೋಚಕ ಕಥೆ. ಅದೇ ಕಾಲಕ್ಕೆ ಐರೋಪ್ಯ ಪ್ರಭಾವದಿಂದ ಆಧುನಿಕತೆಯತ್ತ ಪಯಣಿಸಿದ್ದು, ಮತ್ತು ಐರೋಪ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಾ ಬೆಳೆದುಬಂದದ್ದು ಇನ್ನೊಂದು ಕಥೆ. ಅದ್ಭುತ ಸಿನಿಮಾಗಳನ್ನು ನಿರ್ಮಿಸಿದ ಅಕಿರಾ ಕುರಾಸೋವಾ ಜಪಾನೀ ಭಾಷೆಯಿಂದಾಚೆ ರಷ್ಯನ್ ಭಾಷೆಯಲ್ಲಿ ನಿರ್ದೇಶಿಸಿದ ಏಕೈಕ ಸಿನಿಮಾ 'ದೆರ್ಸು ಉಜಾಲಾ', ಆಧುನಿಕತೆ ಮತ್ತು ಐರೋಪ್ಯೀಕರಣವನ್ನೂ, ಸೈಬೀರಿಯಾದ ದುರ್ಗಮತೆಯನ್ನೂ ಅದ್ಭುತವಾಗಿ ಚಿತ್ರೀಕರಿಸಿದೆ. ಆ ಚಿತ್ರದಲ್ಲೂ ಕಾಡಿನಿಂದ ನಾಡಿಗೆ ಬಂದ ದೆರ್ಸುವನ್ನು ರಮಿಸಲು ಪುಟ್ಟ ಹುಡುಗ ಪಿಯಾನೊ ನುಡಿಸುವ ದೃಶ್ಯವಿದೆ. ಪೀಟರ್ ನಂತರ ಆಳಿದ ಕ್ಯಾಥರಿನ್ ದ ಗ್ರೇಟ್ ಕೂಡ, ಸಂಗೀತ–ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬೆಳೆಸಿದಳೆಂದು ಪ್ರತೀತಿ. ಹೀಗಾಗಿ, ಪಾಶ್ಚಾತ್ಯ ಸಂಸ್ಕೃತಿಯ ಜೊತೆಗೆ ಅಲ್ಲಿನ ಸಂಗೀತ, ಮತ್ತು ಪಿಯಾನೊದಂತಹ ಸಂಗೀತ ವಾದ್ಯಗಳೂ ಪೂರ್ವದತ್ತ ಪಯಣಿಸಿದ್ದು ಆಶ್ಚರ್ಯದ ಮಾತೇನೂ ಅಲ್ಲ.

ಪೀಟರ್‌ನ ಕಾಲದಿಂದಲೂ ಆಧುನಿಕತೆ ಮತ್ತು ಸಂಸ್ಕೃತಿ ಬೆಳೆದು ಬಂದರೂ ರಾಜಕೀಯವಾಗಿ ಆತ ಮತ್ತು ಆಗಿನ ಚಕ್ರವರ್ತಿಗಳು ದಮನಕಾರಿ ನೀತಿಗಳನ್ನು ಅನುಸರಿಸುತ್ತಿದ್ದದ್ದೂ ಹೌದು. ಹೀಗಾಗಿ,